# ಅನುಭಾವಿ ಅಲ್ಲಮ ಪ್ರಭು

ಪ್ರೊ. ಕೆ.ಬಿ. ಪ್ರಭುಪ್ರಸಾದ್



ಕರ್ನಾಟಕದಲ್ಲಿ ಆಗಿಹೋದ ಅನೇಕ ಮಂದಿ ಸಂತರುಗಳ ನಡುವೆ ಬೆಳಗುತ್ತಿರುವ ದಿವ್ಯ ಜ್ಯೋತಿ ಅಲ್ಲಮ ಪ್ರಭುದೇವರು. ಶರಣ ಚಳವಳಿ ನಡೆದ ಸಂದರ್ಭದಲ್ಲಿ ಹಲವು ಮಂದಿ ಸಾಧಕರಿಗೆ ಮಾರ್ಗದರ್ಶನ ನೀಡಿದ ಈ ಧೀಮಂತ ಅನುಭಾವಿಯನ್ನು ಕುರಿತು ಬರೆದಿರುವ ಲೇಖಕರು ನಿವೃತ್ತ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಗೀತರಚನಕಾರರೂ ಆಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

೧೨ನೆ ಶತಮಾನದ ಬಸವಾದಿ ಶರಣ ಸಂಕುಲದಲ್ಲಿ ಅಲ್ಲಮ ಪ್ರಭು ವ್ಯೋಮಸದೃಶನಾಗಿ ಎತ್ತರಕ್ಕೆ ನಿಲ್ಲುವ ಏಕೈಕ ವ್ಯಕ್ತಿ. ಇಡೀ ಶರಣ ಚಳುವಳಿಯ ನೇತಾರ, ಶ್ರೀ ಬಸವೇಶ್ವರ ಭಕ್ತಿ ಭಂಡಾರಿಯಾಗಿ ಜನಮಾನಸಕ್ಕೆ ಹತ್ತಿರನಾಗಿ, ಅವರನ್ನು ಸಾಮಾಜಿಕ ಸನ್ನಡತೆಯ ಬದುಕಿನಲ್ಲಿ ಹಾಗೆಯೆ ಭಕ್ತಿಪಥದಲ್ಲಿ ಮುನ್ನಡೆಸುತ್ತಾನೆ. ಗುರುವಿನ ಗುರು ಅಲ್ಲಮಪ್ರಭು ಜ್ಞಾನ ವೈರಾಗ್ಯಗಳ ಮೂರ್ತಿಯಾಗಿ, ಕೇವಲ ಸಾಮಾಜಿಕ ಸೇವೆಯಲ್ಲಿ ಮುಳುಗಿದ್ದ ಗೊಗ್ಗಯ್ಯ, ಸೊನ್ನಲಿಗೆಯ ಸಿದ್ಧರಾಮೇಶ್ವರ, ಗೋರಖನಾಥ ಮುಂತಾದವರನ್ನು ಆತ್ಮಸಾಧನೆಯ ಶಿವಪಥದಲ್ಲಿ ತೊಡಗಿಸಿದ.

ತಮ್ಮ ಬಳಿಗೆ ಬಂದ ಪ್ರಭುದೇವರನ್ನು ಬಸವಣ್ಣ ಅನುಭವದ ಮಂಟಪದ ಅಧ್ಯಕ್ಷರನ್ನಾಗಿ ಮಾಡಿದ. ಎಲ್ಲ ಶರಣರಿಗೆ ಮಾರ್ಗದರ್ಶಿಯಾಗುವಂತೆ ಒಲಿಸಿ ಒಪ್ಪಿಸಿದ. ಶರಣರು ಮತ್ತು ಶರಣೆಯರು ತಮ್ಮ ತಮ್ಮ ಚಿಂತನೆಗಳನ್ನೂ, ಆಧ್ಯಾತ್ಮಿಕ ಅನುಭವಗಳನ್ನೂ, ಅನುಭವ ಮಂಟಪದಲ್ಲಿ ಹಂಚಿಕೊಳ್ಳುತ್ತಿದ್ದರು. ಎಲ್ಲರೂ ವಚನಗಳ ರೂಪದಲ್ಲಿ ಅವುಗಳನ್ನು ಹೇಳುತ್ತಿದ್ದರು. ಅಲ್ಲಮರ ೬೯೪ ಅಧಿಕೃತ ವಚನಗಳು ಲಭ್ಯವಾಗಿವೆ. **ಗುಹೇಶ್ವರ** ಎಂಬುದು ಅವರ ಅಂಕಿತನಾಮ.

ಬಸವಣ್ಣನವರ ವಚನಗಳು ಸರಳವಾಗಿವೆ. ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತಿವೆ. ಕೆಲವು ಕಾವ್ಯಮಯವಾಗಿಯೂ ಇವೆ. ಆದರೆ ಅಲ್ಲಮರ ವಚನಗಳು ಕ್ಲಿಷ್ಟವಾಗಿವೆ. ಪ್ರತಿಮಾ ರೂಪದಲ್ಲಿ ಕೆಲವು, ಒಗಟುಗಳಂತೆ ಕೆಲವು ಇದ್ದು ಅರ್ಥವಾಗುವುದು ಕಷ್ಟ. ಬೆಡಗಿನ ವಚನಗಳು ಹೇರಳವಾಗಿವೆ. ಎಲ್ಲೋ ಒಂದೊಂದು ವಚನ ಕಾವ್ಯಾಂಶವನ್ನು ಒಳಗೊಂಡಿದೆ.

**ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು**
**ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?**

ಎಂದು ಆರಂಭವಾಗುವ ವಚನ ಸುಂದರವಾದ ಪ್ರತಿಮೆಯಾಗಿದೆ. ಕಾವ್ಯದ ಧ್ವನಿ, ದರ್ಶನದ ಪ್ರಭೆ ಎರಡೂ ಮೇಳವಿಸಿವೆ. ''ಕಂಗಳ ಮುತ್ತ ಪವಣಿಸುವಾಕೆ!'' ಕಾವ್ಯದ ಭಾಷೆ ಎಂದರೆ ಇದು. ತೀರಾ ಸಹಜವಾಗಿ ಮಿಂಚಿದುದು.

**'ಮಾತೆಂಬುದು ಜ್ಯೋತಿರ್ಲಿಂಗ ಸ್ವರವೆಂಬುದು ಪರತತ್ತ್ವ...'**

**'ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯಾ ?..'**

**'ಪ್ರಾಣಲಿಂಗಕ್ಕೆ ಕಾಯವೆ ಸೆಜ್ಜೆ, ಆಕಾಶ ಗಂಗೆಯಲ್ಲಿ ಮಜ್ಜನ..'**

**'ಘನತರ ಚಿತ್ರದ ರೂಪ ಬರೆಯಬಹುದಲ್ಲದೆ ಪ್ರಾಣವ ಬರೆಯಬಹುದೆ?..'**

**'ಶಬ್ದದೊಳಗಣ ನಿಶ್ಶಬ್ದದಂತೆ...'**

ಪರಿಭಾವಿಸಿದಷ್ಟೂ ಹೆಚ್ಚು ಹೆಚ್ಚು ಅರ್ಥದ ಹೊಳಹುಗಳು ಹೊಳೆಯುವ ಇಂಥ ಸಾಲುಗಳನ್ನು ಉದಾಹರಿಸಬಹುದು. ಅಲ್ಲಮರು ಮಾತಾಡುವುದು ರೂಪಕಗಳಲ್ಲೇ. ಕೆಲವೊಮ್ಮೆ ಇಡೀ ವಚನ ಒಂದು ಪ್ರತಿಮೆಯಾಗುತ್ತದೆ.

ಅಲ್ಲಮರು ನಿಜವಾದ ಭಕ್ತಿಯನ್ನು ಒಪ್ಪುತ್ತಾರೆ. ಶ್ಲಾಘಿಸುತ್ತಾರೆ. ಕಪಟಭಕ್ತಿ, ತೋರಿಕೆಯ ಭಕ್ತಿ, ಪ್ರದರ್ಶಕ ಭಕ್ತಿ ಕಂಡಲ್ಲಿ ಕಠಿಣವಾಗಿ ಇಲ್ಲಾ ವ್ಯಂಗವಾಗಿ ಖಂಡಿಸುತ್ತಾರೆ. ಜ್ಞಾನ, ವೈರಾಗ್ಯಗಳ ನಿಧಿಯಾಗಿ, ಅದ್ವೈತ ನಿಲುವಿನ ಪ್ರತಿಪಾದಕರಾಗಿ ನಿಲ್ಲುತ್ತಾರೆ.

**ಭೂಮಿಯ ಕಠಿಣವನು ಆಕಾಶದ ಮೃದುವನು**
**ತಿಳಿವ ಗಮನವಲ್ಲಿಯೆ ನಿಂದಿತ್ತು**
**ಉದಕದೊಳಗೆ ಹುಟ್ಟಿದ ತೃಷೆ ಉದಕವನರಸಿತಲ್ಲಾ!**
**ಒಳಗೆ ಸತ್ತು ಹೊರಗೆ ಆಡುತ್ತದೆ**
**ಗುಹೇಶ್ವರ ನಿಬ್ಬೆರಗಾಗಿ ಅಲ್ಲಿಯೆ ನಿಂದನು.**

ಈ ವಚನವನ್ನೋದಿದ ತಕ್ಷಣ ಅರ್ಥವಾಗುವುದು ಕಷ್ಟ. 'ಒಳಗೆ ಸತ್ತು ಹೊರಗೆ ಆಡುತ್ತದೆ' ಎಂಬ ನುಡಿ ಒಂದು ಒಗಟಿ

ನಂತೆಯೆ ಇದೆ. 'ಗುಹೇಶ್ವರ ನಿಬ್ಬೆರಗಾಗಿ ಅಲ್ಲಿಯೆ ನಿಂದನು.' ದೇವರೆ ನಿಬ್ಬೆರಗಾಗು ವಂಥಾ ಸಂಗತಿ ಏನಿರಬಹುದು? ನೀರೊಳಗೇ ಇದ್ದರೂ ತೃಷೆ ಏಕಾಯಿತು?

ಈ ವಚನ ಒಂದು ರೂಪಕ ಎಂದು ಸ್ಪಷ್ಟವಾಗುತ್ತದೆ. ಅದರ ಅರ್ಥವನ್ನು ಬಿಡಿಸಿ ಹೇಳುವವರು, ಒಂದೋ ಅನುಭಾವಿಯಾಗಿರಬೇಕು ಇಲ್ಲಾ ರೂಪಕಾಲಂಕಾರ, ಪ್ರತಿಮಾ ವಿಧಾನ ಮುಂತಾದ ಕಾವ್ಯಮೀಮಾಂಸೆಯಲ್ಲಿ ಪಳಗಿರಬೇಕು.

ಭೂಮಿಯ ಬಗ್ಗೆ ಆಕಾಶದ ಬಗ್ಗೆ ಒಳ್ಳೆಯ ವೈಜ್ಞಾನಿಕ ತಿಳಿವಳಿಕೆ ಇರಬಹುದು. ಬುದ್ಧಿವಂತರಾದ ವಿಜ್ಞಾನಿಗಳು ಭೂಮಿ ಆಕಾಶಗಳ ಲಕ್ಷಣಗಳನ್ನು ಅಧ್ಯಯನದಿಂದ ಚೆನ್ನಾಗಿ ತಿಳಿದು ವಿವರಿಸಬಹುದು. ಆದರೆ ಅವರ ಗಮನ ಅಲ್ಲಿಗೆ ನಿಂತುಹೋಗುತ್ತದೆ. ಅಂದರೆ ವಿಜ್ಞಾನದ ಸಂಪೂರ್ಣ ಪಾಂಡಿತ್ಯ ಅಷ್ಟಕ್ಕೆ ಸೀಮಿತ. ಆದರೆ ನಿಜವಾದ ಜ್ಞಾನ ಅಷ್ಟಕ್ಕೆ ಮಿತಗೊಳ್ಳುವುದಿಲ್ಲ. ಕಲಿಯಬೇಕಾದುದು ಇನ್ನೂ ಇದೆ. ನೀರಿನಲ್ಲೇ ಇದ್ದು ಬಾಯಾರಿಕೆ ಹೋಗಲಿಲ್ಲ. ಉದಕದಲಿದ್ದು ಉದಕವನ್ನರಸಬೇಕಾಗುತ್ತದೆ. ಬಾಹ್ಯಪ್ರಪಂಚದ ಜ್ಞಾನ ಎಷ್ಟಿದ್ದರೇನು ಆತ್ಮದ ಅರಿವು-ಜ್ಞಾನ ಇಲ್ಲದಿರುವುದು ಒಳಗಿನ ಸಾವು. ಹಾಗೆ ಒಳಗೆ ಸತ್ತಿದ್ದರೂ ಹೊರಗಿನ ತನ್ನ ಜ್ಞಾನದ ಬಗ್ಗೆ ಅಪಾರ ಅಭಿಮಾನ ಇರುತ್ತದೆ. ತಾನು ಮಹಾಜ್ಞಾನಿ ಎಂದು ಮೆರೆಯುವುದನ್ನು ನೋಡಿ ದೇವರು ನಿಬ್ಬೆರಗಾಗುತ್ತಾನೆ. ನಗುತ್ತಾನೆ. ದೇವರಿಗೆ ಆಶ್ಚರ್ಯವಾಗುವುದೇಕೆ ಎಂದರೆ ತನ್ನ ಅಂಶವೇ ಆದ ಈ ಜೀವಾತ್ಮನು ತನ್ನನ್ನು ತಾನು ಮರೆತುಬಿಟ್ಟಿದ್ದಾನಲ್ಲ! ಎಲ್ಲ ಜ್ಞಾನವು ಅಂತರಂಗದಲ್ಲೆ ಅಡಗಿದ್ದೂ ಕ್ಷಣಿಕವಾದ ಸಾಂಸಾರಿಕ ವಿಷಯಸುಖದಲ್ಲೆ ಮುಳುಗಿರುವುದೇ ಈ ಜೀವಾತ್ಮನ ಈ ಸ್ಥಿತಿಗೆ ಕಾರಣ. 'ಪುನರಪಿ ಜನನ ಪುನರಪಿ ಮರಣ'ದ ಭವಚಕ್ರದಲ್ಲಿ ಸಿಕ್ಕು ಬಂಧಿತನಾಗಿದ್ದಾನಲ್ಲಾ ಎಂಬುದು ಆ 'ನಿಬ್ಬೆರಗಿ'ಗೆ ಕಾರಣ.

ಇನ್ನೊಂದು ಬಹು ಪ್ರಖ್ಯಾತ ವಚನವನ್ನು ಅರ್ಥೈಸಬಹುದು:

**ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂಬೆನಯ್ಯಾ ;**
**ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂಬೆನಯ್ಯಾ ;**
**ದ್ವಾಪರ ಯುಗದಲ್ಲಿ ಶ್ರೀಗುರು ಶಿಷ್ಯಂಗೆ ಜಂಕಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂಬೆನಯ್ಯಾ;**
**ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂಬೆನಯ್ಯಾ ;**
**ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ**
**ನಾನು ಬೆರಗಾದೆನು.**

ಇಲ್ಲಿ ಬೆರಗಾಗುವ ಸರದಿ ಭಕ್ತನದು. ವಚನ ಸುಲಭವಾಗಿ ಅರ್ಥವಾದಂತೆ ಅನಿಸುತ್ತದೆ. ಗುರು ಸಾಮಾನ್ಯನಲ್ಲ. ಶ್ರೀಗುರು ಸದ್ಗುರು. ಶಿಷ್ಯರಿಗೆ ಏನು ಕಲಿಸಬೇಕು, ಹೇಗೆ ಕಲಿಸಬೇಕು ಎಂಬುದನ್ನೆಲ್ಲ ಚೆನ್ನಾಗಿ ಅರಿತವನು. ಆಯಾ ಯುಗದ ಮನೋಧರ್ಮಕ್ಕನುಗುಣವಾಗಿ ತನ್ನ ಬೋಧನೆಯ ವಿಧಾನವನ್ನು ಬದಲಾಯಿಸುತ್ತಾನೆ. ಅವನು ಹೇಗೆ ಬೋಧಿಸುತ್ತಾನೊ ಅದನ್ನೇ ಒಪ್ಪಿಕೊಂಡು ಮಹಾಪ್ರಸಾದ ಎಂದು ಸ್ವೀಕರಿಸುವವನೆ ತಕ್ಕ ಶಿಷ್ಯ.

ಲಾಘವವಾಗಿ ಕೆಲವರು ಈ ವಚನವನ್ನು ವ್ಯಾಖ್ಯಾನಿಸುತ್ತಾರೆ. ಶ್ರೀಗುರುವಿನ ಸ್ಥಿತಿಯನ್ನು ನೋಡಿ ಕನಿಕರಿಸಬೇಕಾಗುತ್ತದೆ. ಕೃತಯುಗದಲ್ಲಿ ಗುರು ಶಿಷ್ಯನಿಗೆ ಹೊಡೆದು ಕಲಿಸಿದರೂ ಶಿಷ್ಯರು ಅದೇ ಮಹಾಪ್ರಸಾದ ಎಂದು ಶಿಷ್ಯರೂ ಮತ್ತು ಅವರ ಪಾಲಕರೂ ಆಕ್ಷೇಪಿಸುತ್ತಿರಲಿಲ್ಲ. ತ್ರೇತಾಯುಗದಲ್ಲಿ ಬೈದು ಕಲಿಸಿದರೆ ಮಾತ್ರ ಒಪ್ಪಿಕೊಳ್ಳುತ್ತಿದ್ದರು. ಹೊಡೆಯಕೂಡದು ಅಷ್ಟೆ. ದ್ವಾಪರ ಯುಗದಲ್ಲಿ ಹೊಡೆಯುವಂತೆಯೂ ಇಲ್ಲ ಬೈಯುವಂತೆಯೂ ಇಲ್ಲ. ಬೇಕಾದರೆ ಜಂಕಿಸ(ಗದರಿಸ)ಬಹುದು. ಕಲಿಯುಗದಲ್ಲಿ ಅಷ್ಟಕ್ಕೂ ಅವಕಾಶವಿಲ್ಲ. ಶಿಷ್ಯನಿಗೆ ಗುರುವೇ ವಂದಿಸಿ ಕಲಿಸಬೇಕು.

ಈ ವಚನದ ಸರಿಯಾದ ಅರ್ಥವನ್ನು ತಿಳಿಸುವ ವ್ಯಾಖ್ಯಾನ ಹೀಗಿದೆ: ಶಿಷ್ಯನನ್ನು ಜ್ಞಾನಿಯನ್ನಾಗಿ ಮಾಡುವುದು ಶ್ರೀಗುರುವಿನ ಉದ್ದೇಶ. ಶಿಷ್ಯರ ಗುಣ-ಸ್ವಭಾವ ಉತ್ತಮಗೊಂಡಂತೆ ಶ್ರೀಗುರು ಸಂತೋಷಿಸುತ್ತಾನೆ, ತನ್ನ ಕಲಿಸುವ ರೀತಿಯನ್ನು ಬದಲಾಯಿಸಿಕೊಳ್ಳುತ್ತಾನೆ, ಸಂತೋಷಿಸುತ್ತಾನೆ. ಯುಗದ ಹೆಸರು ಇಲ್ಲಿ ಸಾಂಕೇತಿಕ. ಶಿಷ್ಯರ ಮನೋಭಾವವನ್ನು ಸೂಚಿಸುವ ಪದ. ನಾಲ್ಕು ಯುಗಗಳಲ್ಲಿ ಮೊದಲನೆಯದು, ಐಹಿಕ ಭೋಗೋಪಭೋಗಗಳಲ್ಲಿ ಆಸಕ್ತಿಯಿರುವ ಮನೋಧರ್ಮ. ಯುಗಧರ್ಮ. ಶಿಷ್ಯರು ಮೊದಲ ಹಂತದಲ್ಲಿರುವವರು. ಅವರನ್ನು ವಿಷಯ ಲಾಲಸೆಯಿಂದ ಬಿಡಿಸಿ ಶಿವಪಥಕ್ಕೆ ಹಚ್ಚುವುದು ಸುಲಭವಲ್ಲ. ಆದ್ದರಿಂದ ಗುರು ಹೊಡೆದು-ಬಡಿದು ಬುದ್ಧಿಗಲಿಸುತ್ತಾನೆ.

ತ್ರೇತಾಯುಗ ಶಿಷ್ಯರಿಗೆ ಶಕ್ತಿ ಹಾಗೂ ಸಾಧನೆಗಳಲ್ಲಿ ಆಸಕ್ತಿ. ಸಿದ್ಧಿಗಳನ್ನು ಪಡೆಯಲು ಕಠಿಣ ಸಾಧನೆ ಮಾಡಲೂ ಸಿದ್ಧ. ಇವರ ಸಿದ್ಧಿಗಳ ಮೇಲಿನ ಗೀಳನ್ನು ತೊಡೆದು ಹಾಕಲು ಬೈದು ಬುದ್ಧಿ ಕಲಿಸಬೇಕಾಗುತ್ತದೆ. ಹೊಡೆದು ಬಡಿದು ಮಾಡುವ ಅಗತ್ಯವಿಲ್ಲ. ಬೈದರೆ ಸಾಕು ಸಿದ್ಧಿಗಳ ಮೋಹ ಹೋಗಿ ಆತ್ಮಮುಖಿ ಆಗುತ್ತಾರೆ. ಮೂರನೆಯ ಬಗೆ ದ್ವಾಪರಯುಗದ ಶಿಷ್ಯರು. ಇವರು ಕೀರ್ತಿ-ಯಶಸ್ಸುಗಳನ್ನು ಗಳಿಸುವುದರಲ್ಲಿ ನಿರತರು. ಕೀರ್ತಿಕಾಮನೆಯಿಂದ ವಿಮುಖಗೊಳಿಸುವುದು ಕಷ್ಟದ ಕೆಲಸವೇನಲ್ಲ. ಆಗ ಶ್ರೀಗುರು ಕಿಂಚಿತ್ ಗದರಿದರೂ ಸಾಕು ಶಿಷ್ಯರು ಎಚ್ಚೆತ್ತುಕೊಳ್ಳುತ್ತಾರೆ. ಕೀರ್ತಿಶನಿಯಿಂದ ಬಿಡಿಸಿಕೊಳ್ಳುತ್ತಾರೆ.

ಇನ್ನು ಕಲಿ ಯುಗದ ಶಿಷ್ಯರು ತುಂಬಾ ವಿಕಾಸಗೊಂಡವರು. ಅವರ ಬುದ್ಧಿ ಬಹು ಚುರುಕು. ಸತ್ಯಾನ್ವೇಷಿಗಳು, ಜ್ಞಾನಪಿಪಾಸುಗಳು. ಶಿಷ್ಯರಲ್ಲಿರಬೇಕಾದ ಈ ಅಪರೂಪವಾದ ಗುಣಗಳನ್ನು

ಕಂಡು ಗುರು ಸಂತೋಷಿಸುತ್ತಾನೆ. ಅವರನ್ನು ಆದರಿಸುತ್ತಾನೆ, ಕೊಂಡಾಡುತ್ತಾನೆ. ಮತ್ತು ವಂದಿಸಿ ಕಲಿಸುತ್ತಾನೆ. ಹೀಗೆ ಗುರು ಕರುಣೆ ಶಿಷ್ಯರ ಒಳಿತಿಗಾಗಿ ವಿವಿಧ ರೂಪದಲ್ಲಿ ವ್ಯಕ್ತವಾಗುತ್ತದೆ. ಇದು ಗುಹೇಶ್ವರನ ಕಾಲದ ಕಟ್ಟಳೆಯ ಮಹಿಮೆ. ಶ್ರೀಗುರುವಿನ ಅನುಗ್ರಹದಿಂದ ಭೋಗಾಪೇಕ್ಷೆ ಹೋಗಿ, ಸಿದ್ಧಿ ಕಾಮನೆಯೂ ಕೊನೆಯಾಗಿ, ಕೀರ್ತಿಶನಿಯೂ ಬಿಟ್ಟು ಹೋಗಿ ಶಿವಾನಂದದ ಅನುಭವ-ಆನಂದ ದೊರಕುವುವು. ಶ್ರೀ ಗುರುವಿನ ಕೃಪೆಯಿಂದ ದೊರೆತುದೇ ಮಹಾಪ್ರಸಾದ.

ಜೀವನದಲ್ಲಿ ಸುಖ-ದುಃಖ ಎರಡೂ ಇರುತ್ತವೆ, ನಿಜ. ಆದರೆ ಸಮಸಮವಾಗಿರುವುದಿಲ್ಲ.

**ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ, ನೋಡಾ**
**ಗಳಿಗೆಯ ಬೇಟವ ಮಾಡಿಹೆನೆಂಬ ಪರಿಯ ನೋಡಾ**
**ತನ್ನನಿಕ್ಕಿ ನಿಧಾನವ ಸಾಧಿಸಿಹೆನೆಂದಡೆ**
**ಬಿನ್ನಾಣ ತಪ್ಪಿತು ಗುಹೇಶ್ವರಾ**

ಸುಖ ಸಾಸಿವೆಯಷ್ಟು. ದುಃಖ ಸಾಗರದಷ್ಟು. ಇದು ಎಲ್ಲರ ಅನುಭವ. ಆದರೂ ಕ್ಷಣ ಸುಖಕ್ಕಾಗಿ ಕಾತರಿಸುವುದು ಮನುಷ್ಯ ಸ್ವಭಾವ. ಆಶ್ಚರ್ಯವುಂಟುಮಾಡುತ್ತದೆ. ತನ್ನನಿಕ್ಕಿ ಅಂದರೆ ತನ್ನ ನಿಜಸ್ವರೂಪವನ್ನು ಮರೆತು ಪ್ರಾಪಂಚಿಕ ಸುಖವೆ ಪರಮ ಸಂಪತ್ತೆಂದು ಅದರ ಹಿಂದೆ ಹೋದರೆ 'ಬಿನ್ನಾಣ' ತಪ್ಪಿತು. ಭಕ್ತಿಯ ಪರವಶತೆ, ಆತ್ಮಾನುಭೂತಿಯ ಆನಂದ ತಪ್ಪಿ ಹೋಗುತ್ತದೆ.

ಹೀಗಿದ್ದರೂ,

**ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ**
**ಹೊನ್ನು ಹೆಣ್ಣು ಮಣ್ಣಿಗೆ ಸತ್ತುದು ಕೋಟಿ!**
**ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ.**

ಸುಖ ಸಾಸಿವೆಯಷ್ಟು ಎಂದು ತಿಳಿದರೂ ಆಸೆ ಹಿಂಗಲಿಲ್ಲ. ತಮ್ಮ ಆಸೆಗಳನ್ನು ತಣಿಸಲು ಇಡೀ ಜೀವಮಾನ ತಮ್ಮೆಲ್ಲ ಬುದ್ಧಿ-ಚಾತುರ್ಯಗಳನ್ನು ಉಪಯೋಗಿಸುತ್ತಾರೆ. ಹೊನ್ನು ಹೆಣ್ಣು ಮಣ್ಣುಗಳಿಗಾಗಿ ಶ್ರಮಿಸುತ್ತಾರೆ. ಇಂಥವರು ಕೋಟಿಗಟ್ಟಲೆ ಇದ್ದಾರೆ. ಆದರೆ ಇವೆಲ್ಲಕ್ಕಿಂತ ಪರಮಸುಖವನ್ನೂ ಅಖಂಡ ಶಾಂತಿಯನ್ನೂ ಕೊಡುವ ಪರವಸ್ತುವೊಂದು ಇದೆ ಎಂಬ ಜ್ಞಾನದಿಂದ, 'ಹೇ ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ' ಎನ್ನುತ್ತಾರೆ ಅಲ್ಲಮರು.

**ಇಷ್ಟ ಲಿಂಗವ ತೋರಿ ಮೃಷ್ಟಾನ್ನವ ಹೊಡೆವವರಿಗೆ**
**ಇಷ್ಟಾರ್ಥ ಸಿದ್ಧಿಯೆಲ್ಲಿಯದೊ?**
**ಅದೆಲ್ಲಿದೆಯೊ ಲಿಂಗ, ಅದೆಲ್ಲಿದೆಯೊ ಜಂಗಮ?**
**ಅದೆಲ್ಲಿಯದೊ ಪ್ರಸಾದ?**
**ಅಲ್ಲದಾಟವನಾಡಿ ಎಲ್ಲರೂ ಮುಂದುಗೆಟ್ಟರು**
**ಗುಹೇಶ್ವರಾ, ನಿಮ್ಮಾಣೆ!**

ಭೋಜನ ಸುಖಕ್ಕಾಗಿ ಲಿಂಗವನ್ನು ಧರಿಸಿದ ಆಷಾಢಭೂತಿಗಳು ಶಿವಯೋಗದ ಸುಖವನ್ನೆಂದಿಗೂ ಪಡೆಯಲಾರರು. ಇದು ಅಲ್ಲದಾಟ (ಕಪಟ ನಾಟಕ). ಮಾಡಬಾರದ ಮೋಸ, ಇಂಥವರು ಲಿಂಗವನ್ನು ಧರಿಸುವುದು ಆಡಂಬರಕ್ಕೆ, ಭಕ್ತಿಯಿಂದಲ್ಲ. ಆದ್ದರಿಂದ ಇವರು ಭವಬಂಧನಕ್ಕೆ-ಜನನ ಮರಣಗಳ ಚಕ್ರಕ್ಕೆ ಸಿಕ್ಕಿಕೊಳ್ಳುತ್ತಾರೆ.

ಕಟುವಾಗಿ, ಇಲ್ಲಾ ವ್ಯಂಗ್ಯವಾಗಿ ದಾರಿ ತಪ್ಪಿದವರನ್ನು ಖಂಡಿಸಿದರೂ ಅಲ್ಲಮರಲ್ಲಿ ಸರ್ವಭೂತಾನುಕಂಪೆ, ದಯಾರ್ದ್ರ ಹೃದಯ ಇವೆ. ಇದಕ್ಕೆ ಉದಾಹರಣೆ ಈ ವಚನ:

**ಜಾಲಗಾರನ ಕಾಲು ಮುಳ್ಳು ತಾಗಿ ನೊಂದಿತ್ತೆಂಬಂತೆ**
**ಸೊನೆಗಾರನ ಮನೆಯಲ್ಲಿ ಹೆಣ ಹೋಗಿ ಅಳುವಂತೆ**
**ಕನ್ನಗಳ್ಳನ ಮನೆಯಲ್ಲಿ ಬಟ್ಟಲು ಹೋಗಿ ಮರುಗುವಂತೆ**
**ಠಕ್ಕನ ಪೂಜೆಗೆ ಮೆಚ್ಚುವನೆ ನಮ್ಮ ಗುಹೇಶ್ವರಾ**

ಬೆಸ್ತ ತನ್ನ ಕಾಲಿಗೆ ಒಂದು ಮುಳ್ಳುಚುಚ್ಚಿದರೆ 'ಹಾ, ನೋವು' ಎಂದು ನರಳುತ್ತಾನೆ. ಆದರೆ ತನ್ನ ಬಲೆಯಲ್ಲಿ ಸಿಕ್ಕಿಕೊಂಡ ಮೀನುಗಳು ಸತ್ತೇ ಹೋಗುವುದನ್ನು ನೋಡಿ ಮರುಗುವುದಿಲ್ಲ. ಕಟುಕ ಪ್ರತಿದಿನ ನೂರಾರು ಮೂಕ ಪ್ರಾಣಿಗಳನ್ನು ನಿಷ್ಕರುಣೆಯಿಂದ ಕಡಿಯುತ್ತಾನೆ ಆದರೆ ತನ್ನ ಮನೆಯಲ್ಲಿ ಯಾರಾದರೂ ಸತ್ತರೆ ದುಃಖಿಸುತ್ತಾನೆ. ಮನೆಮನೆಗಳಿಗೆ ಕನ್ನ ಹಾಕಿ ಬೆಲೆಬಾಳುವ ಚಿನ್ನದ ಆಭರಣಗಳನ್ನು ಕದ್ದು ಸಂತೋಷಿಸುವ ಕಳ್ಳ ತನ್ನ ಮನೆಯಲ್ಲೊಂದು ಯಃಕಶ್ಚಿತ್ ಬಟ್ಟಲು ಕಳೆದು ಹೋದರೆ ಒದ್ದಾಡುತ್ತಾನೆ. ತನಗಾದ ನಷ್ಟ-ನೋವು ಅಸಹನೀಯವಾಗಿ ಕಾಣುವುದು. ಆದರೆ ಅನ್ಯರಿಗಾದ ನೋವು ಲೆಕ್ಕಕ್ಕೆ ಬಾರದು. ಲೋಕದಲ್ಲಿ ಇಂಥವರೆ ತುಂಬಿದ್ದಾರೆ. ಇವರ ಭಕ್ತಿ, ಪೂಜೆ, ದಾನ-ಧರ್ಮ ಎಲ್ಲ ತೋರಿಕೆಗೆ. ಇಂಥಾ ಠಕ್ಕು ಪೂಜೆ-ಸಾತ್ವಿಕತೆಗಳನ್ನು ದೇವರು ಮೆಚ್ಚಿ ಹೇಗೆ ತಾನೆ ಒಲಿದಾನು!

ಇವು ಅಲ್ಲಮ ಪ್ರಭುದೇವರ ವಚನಗಳಲ್ಲಿ ಕೇವಲ ನಾಲ್ಕೈದು ಮಾದರಿ. ಇನ್ನು ಹಲವಾರು ವಚನಗಳು ಒಗಟಿನ (ತುಂಬಾ ಬುದ್ಧಿವಂತರಾದವರು ಮಾತ್ರ ಬಿಡಿಸಬಹುದಾದ) ವಚನಗಳು: ಬೆಡಗಿನ ವಚನಗಳು, ಅರ್ಥವೇ ಆಗದ (ಆದರೆ ಅನುಭಾವಿಗಳು ವಿವರಿಸಿದಾಗ ಮಾತ್ರ ಝಗ್ಗನೆ ಅರ್ಥದ ಬೆಳಕು ಬೆಳಗುವಂತಹ) ವಚನಗಳು, ಕೆಲವು ಯೌಗಿಕ ಪರಿಭಾಷೆಯಲ್ಲಿರುವ ವಚನಗಳೂ ಇವೆ.

ವಚನಕಾರರಲ್ಲಿ ಅಲ್ಲಮಪ್ರಭುದೇವರು ಅದ್ವಿತೀಯರು. ಜ್ಞಾನ ವೈರಾಗ್ಯಗಳ ಪ್ರತೀಕ. ಹಿಮಾಲಯ ಸದೃಶವಾದ, ಮುಗಿಲೆತ್ತರ ನಿಲ್ಲುವ, ವಿಶಿಷ್ಟ ವ್ಯಕ್ತಿ. ಗುರುವಿಗೆ ಗುರು ಶ್ರೀಗುರು. ಮಾಯೆಗೆ ಸಿಲುಕದ ಅನುಪಮಚರಿತರು. ಕವಿಗಳವಾಣಿಯಲ್ಲಿ 'ಮಾಯಾಕೋಲಾಹಲ!'